Regd No B G. 155

Sri

10—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ಏ ಸುಬ್ಬರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನಪೈ

Protect the Cow
ಗೋಸಂರಕ್ಷಣೆ ಮಾಡಿ

ಸಂಸ್ಕೃತಕ್ಕೆ ಆನಾವರಣೆ !

ಮಹಾರಾಷ್ಟ್ರದ ಶಾಸನಸಭಾ ಅಧ್ಯಕ್ಷರು ಕೆಲವು ದಿವಸಗಳ ಹಿಂದೆ ಓರ್ವ ಹೊಸದಾಗಿ ಚುನಾಯಿತರಾದ ಸದಸ್ಯರು ಸಂಸ್ಕೃತದಲ್ಲಿ ಪ್ರಮಾಣವಚನ ಸ್ವೀಕರಿಸುವುದನ್ನು ತಿರಸ್ಕರಿಸಿದರು ; ಜನಸಂಘದ ಸದಸ್ಯರಾದ ಅವರು ಡಾ || ಏ ಆರ್ ಪಂಡಿತರು ಕಡೆಗೆ ಹಿಂದಿಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಸದಾಚಾರ

ಲಾಡೆಕಿನಾರಾತ್ರಿನ ಒಬ್ಬ, ಕುಂಟಿಗಾವುಸ್ಥರು ಗೃಹಮಂತ್ರಿ ನಂದಾರವರ ಸದಾಚಾರ ಕಚೇರಿಗೆ ಕೆಲವು ದಿವಸಗಳ ಹಿಂದೆ ಬಂದು, ತಾನು ಮೆಹಂದಿಯಲ್ಲಿ ಟೆಬಿ ಆಸ್ಪತ್ರೆಗೆ ಮತ್ತ, ವಿಶ್ರಾಂತಿಗೃಹ ಕಟ್ಟಲು 27 ಗಿಗಾ ಭೂದಾನ ಮಾಡಿ ಒಹಳ ದಿವಸಗಳಾಗಿದ್ದರೂ ಇನ್ನೂ ಅದನ್ನು ಉಪಯೋಗಿಸಿಕೊಳ್ಳಲಾಗಿರುವುದು ಏಲ್ಲವೆಂದು ದೂರಿತ್ತನು : ಕೂಡಲೇ ಸ ಕಾರ್ಯಕ್ರಮ ಕೈಗೊಳ್ಳಲಾಗುವದೆಂದು ನಂದಾರವರು ಭರವಸೆ ನೀಡಿದರು.

× ನಗರದಲ್ಲಿನ ನೂರು ಮೂವತ್ತು ಸಹಕಾರ ಸಂಘಗಳ ಮೂಲಕ ಬಿಳಿಗೈಯಿಂದ ಜನರು ಕ್ಯೂನಲ್ಲಿ ನಿಂತಿರುವಲು ಅಹಾರ ಧಾನ್ಯಕ್ಕಾಗಿ ಈ ಕ್ಯೂ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಠಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂದತ್ಯಕೃಷ್ಣ ಜೋಯಿಸರವರಿಂದ
11 ಭಾನುವಾರ ಪಸ್ಯಿ ಜೇಷ್ಠ
ಸಂಪ್ರತೀ ಪೂಜೆ

ಸೋಮವಾರ ಸ್ಥಾಪಕರ ದಿನಾಚರಣೆ
ಸತ್ಯವಾದಿ ಕಾರ್ಯಾಲಯ ಕ್ಕೆ ರಜವಿಡಿ

ಮಿಶ್ರ ಪದಾರ್ಥ

ಟೋಕಿಯೋದಿಂದ ಬಂದಿರುವ ವರದಿ ಇದು. ಏಳು ಜಪಾನು ಗಿಂಣಿಗಳಿಗೆ ಚೀಣಾ ಸರಬರಾಜು ಮಾಡಿದ ಕಬ್ಬಿಣದ ಅದುರಿನಲ್ಲಿ ಮಂಳು, ಇತರ ಕೊಳಕು ವಸ್ತುಗಳು ಮತ್ತು ಕಬ್ಬಿಣ ಜೂರು ಇದ್ದುದು ಪತ್ತೆ ಆಗಿದೆ ಗಿಂಣಿಯವರು ಈ ಬಗ್ಗೆ ಭಾರಿ ನಷ್ಟ ಪರಿಹಾರಕ್ಕೆ ಹಕ್ಕೆದ್ದಡ್ಡುವುದಾಗಿ ವಂದಿ ಆಗಿದೆ

★

ನಾಗಾ ಗುಂಪು

ನಾಗಾಲ್ಯಾಂಡು ಗಡಿಯಲ್ಲಿ ಅಸ್ಸಾಮಿನ ಉತ್ತರ ಕಾಚಾರು ಬೆಟ್ಟ ಭಾಗಗಳಲ್ಲಿ ಹಸರು ಮತ್ತು ಕಾಕಿ ದಿರುಪಿನ ಸಶಸ್ತ್ರ ನಾಗಾ ದೌರ್ಜನ್ಯಕಾರರ ಗುಂಪು ಕಂಡು ಬಂದಿದೆ.

★

ಮೊಕದ್ದಮೆ

ಉತ್ತರ ಪ್ರದೇಶ ಸರ್ಕಾರವು ಇನ್ನೊಂದುಮೂವತ್ತೈದು ಧಾನ್ಯ ವರ್ತಕರ ಮೇಲೆ ಮೊಕದ್ದಮೆ ಹೂಡಿದೆ ಎಂದು ಲಕ್ನೋ ವಾರ್ತೆ.

★

ಮುಷ್ಕರ

ಕೊಚ್ಚಿ ರೇವಿನ ಕೆಲಸಗಾರರ ಮುಷ್ಕರ ನಡೆಯುತ್ತಿದೆಂದು ಎರ್ನಾಕುಲಂ ವರದಿ ತಿಳಿಸುತ್ತದೆ. ಒಬ್ಬರಿಗೆ ತಿಂಗಳಿಗೆ ಇಪ್ಪತ್ತು ಕಿಲೋ ಅಕ್ಕಿ ಕೇಳುತ್ತಾ ವಿಲ್ಲಿಂಗ್ಡನ್ ದ್ವೀಪದ ರಸ್ತೆಗಳಲ್ಲಿ ಮೆರವಣಿಗೆ ಮಾಡಿದರು.

★

ಭುವನೇಶ್ವರದಿಂದ ಬಂದಿರುವ ವರದಿಯ ಪ್ರಕಾರ, ವಿದ್ಯಾರ್ಥಿಗಳ ಅಶಾಂತತೆ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆ ನಡೆಸುವಂತೆ ಸರ್ಕಾರವನ್ನು ಒತ್ತಾಯಮಾಡಿ ವಿಫಲಗೊಂಡ ಕಾರಣ ಒರಿಸ್ಸಾ ಅಸೆಂಬ್ಲಿಯಲ್ಲಿ ವಿರೋಧಪಕ್ಷದವರು ಸಭಾತ್ಯಾಗ ಮಾಡಿದರು.

ಸಭಾತ್ಯಾಗ

ಭಕ್ಸಿ ಗುಲಾಂ ಮಹಮದ್ ಬಂಧಸಹಾಗೂ ಶಾಸನ ಸಭೆ ಅಧಿವೇಶನವನ್ನು ಕಳೆದ ಮಾಹೆ 22 ರಂದು ಸಮಾಪ್ತಿಗೊಳಿಸಿದ ಬಗ್ಗೆ ಬಂದಿದ್ದ 3 ನಿಲುವಳಿ ಸೂಚನೆಗಳನ್ನು ಸ್ಪೀಕರ್ ಶ್ರೀ ಫಾತೇದಾರರು ತಳ್ಳಿ ಹಾಕಿದ್ದಕ್ಕೆ ಭಕ್ಸಿ ಸರ್ಕಾರದ ಸದಸ್ಯರು ಕೂಗಾಟದ ಮಧ್ಯ ಸಭಾ ಪರಿತ್ಯಾಗ ಮಾಡಿದರು ಎಂದು ಶ್ರೀನಗರದಿಂದ ವಾರ್ತೆ

★

ಯೋಜನೆ ಇಲ್ಲ

ಚೀಣಾ-ಭಾರತ ಗಡಿ ಕಲಹದ ವಿಚಾರದಲ್ಲಿ ಕೊಲಂಬೊಶಕ್ತಿಗಳ ಹೊಸ ಕಾರ್ಯಕ್ರಮವೇನೂ ಸದ್ಯಕ್ಕಿಲ್ಲವೆಂದೂ, ಈ ಸಮಸ್ಯೆ ಶಾಂತಿಯುತವಾಗಿ ಬಗೆಹರಿಯಲು ತಮ್ಮ ತಮ್ಮಲ್ಲಿ ಪರ್ಯಾಲೋಚನೆ ನಡೆಸಲಾಗುತ್ತಿರುವುದೆಂದೂ ತಟಸ್ಥ ಸಮ್ಮೇಳನದಲ್ಲಿ ಸಿಂಹಳ ಪ್ರಧಾನಿ ಶ್ರೀಮತಿ ಬಂಡಾರನಾಯಕೆಯವರು ತಿಳಿಸಿದರು ಎಂದು ಕೈರೋ ವಾರ್ತೆ.

ಕೈರೋದಿಂದ ಬಂದಿರುವ ವಾರ್ತೆ

ಪ್ರಕಾರ ಅಧ್ಯಕ್ಷ ದಿ|| ನೆಹರೂ ವಿಶ್ವ ಶಾಂತಿಗಾಗಿ ಒಲಯುತವಾಗಿ ದುಡಿದ ಮಹನೀಯರೆಂದು ತಟಸ್ಥ ಸಮ್ಮೇಳನದಲ್ಲಿ ನೇಪಾಳದ ರಾಜ ಮಹೇಂದ್ರರು ಪ್ರಶಂಸಿಸಿದರು

ಪಾಕಿಸ್ತಾನದ ಅಧ್ಯಕ್ಷ ಅಯೂಬರು ಲಾಹೋರಿನಲ್ಲಿ ಪಾಕಿಸ್ತಾನಿ ಯೋಚನೆಗಾರರ ಸಮ್ಮೇಳನದಲ್ಲಿ ಮಾತನಾಡುತ್ತಾ, ಭಾರತೀಯರು ಚಿಕ್ಕಮನಸ್ಸಿನವರೆಂದೂ, ಭಾರತ ಖಂಡಿತವಲ್ಲದ ದೇಶವೆಂದೂ ಹೇಳಿದುದಾಗಿ ವಂದಿ ಆಗಿದೆ ಈ ವಿಚಾರ ಭಾರತ ಪ್ರಧಾನಿಗಳಿಗೆ ತಿಳಿಸಲಾಗುತ್ತೆ.

ಏಕೆ ಪ್ರಕಟಿಸಲಿಲ್ಲ ?

6 ನೇ ತಾ|| ಸಂಜೆ ಮಾನ್ಯ ಗೃಹ ಮಂತ್ರಿ ಶ್ರೀ ಆರ್ ಎಂ ಪಾಟೀಲರು ಸಮಾರಂಭವನ್ನು ಮುಗಿಸಿಕೊಂಡು ರೈಲ್ವೆಯವರ ಸಮಾರಂಭಕ್ಕೆ ಬಂದರು ಹಿಂದೆ ಭಾಗವಹಿಸಿದ ಸಮಾರಂಭ ಜನರಿಗೆ ಮುಖ್ಯವಾದುದೆಂದು, ಪ್ರಕಟಿಸಬೇಕೆಂದು ಮಾನ್ಯ ಮಂತ್ರಿಗಳು ನಡಿದರು ವಾರ್ತೆ ಇಲಾಖೆಯ ಡೈರೆಕ್ಟರಾದ ಶ್ರೀ ಶಾಂತೀಶ ಪಾಟೀಲರು ವಾರ್ತೆ ಇಲಾಖೆಯ ಶ್ರೀ ರುದ್ರಯ್ಯನವರು ರೈಲ್ವೆಯವರ ಟೀಗೆ ಬಂದಿದ್ದು ಮಂತ್ರಿಯವರ ಸಲಹೆ ಕೇಳಿದರು

ಮೈಸೂರು ದಸರಾ ವಸ್ತುಪ್ರದರ್ಶನ

ವಿಶೇಷ ಕಾರ್ಯಕ್ರಮ

11-10-64 ನೇ ಭಾನುವಾರ ಸಂಜೆ **6-30** ಗಂಟೆಗೆ

ಮದರಾಸಿನ

ಕುಮಾರಿಯರಾದ ಕಮಲಾ, ರಾಧಾ ಮತ್ತು ವಾಸಂತಿಯವರಿಂದ

ಅಮೋಘ ನೃತ್ಯ ಪ್ರದರ್ಶನ

ಕಾರ್ಯದರ್ಶಿ

ದಸರಾ ಮೆನೆಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 11 ರಂದು ಟೌನ್‌ಹಾಲಿನಲ್ಲಿ 9 ರಿಂದ 12 ಮತ್ತು 3 ರಿಂದ 7 ರವರೆಗೂ, ಎಗ್ಮೊರಿನಲ್ಲಿ 5-30 ರಿಂದ 9 ರವರೆಗೂ, ಗವಿ ಕ, ಸಂಗೀತ, ಸಾರಂಗಿ ಮುಖವೀಣೆ, ನಾಗಸ್ವರ, ಕ ಮಾರಿ ಕನುಲಾ ನೃತ್ಯ ಏರ್ಪಡಿಸಲಾಗಿದೆ

ಶಾಸ್ತ್ರಗಳನ್ನು ಟೀಕಿಸುವುದು ಸರಿಯೇ ?

(ಮುಂದುವರಿದುದು)

' ಯಾವನು ಶ್ರೀ ಹರಿಗೂ, ಹಾಗೆಯೇ ತನ್ನ ಗುರುವಿಗೂ ಅವಿಚ್ಛಿನ್ನ ಭಕ್ತನಾಗಿರುತ್ತಾನೋ ಅವನಿಗೆ ಮಾತ್ರ ಒಳಗೆ ಹುದುಗಿರುವ ಅರ್ಥವನ್ನು ಹೇಳುತ್ತಾರೆ : ಘಿಕ್ಕವರು ಶಾಸ್ತ್ರಗಳನ್ನೆಲ್ಲಾ ತಮ್ಮ ಬೆಂಕಿನಲ್ಲೇ ಇಟ್ಟುಕೊಂಡಿರಬಹುದು, ಅದರೆ ಅವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಶಾಸ್ತ್ರಗಳು ಮುನಃ ಹೇಳುತ್ತವೆ— ' ಹೇ ನಿಧಾಗ ! ನೀನು ಜ್ಞಾನಿಗಳಲ್ಲಿ ಜ್ಞಾನಿಯು ; ನೀನು ತಿಳಿಯಬೇಕಾದುದು ಯಾವುದೂ ಇಲ್ಲ ; ಏಕೆಂದರೆ ಭಗವಂತನ ಕೃಪೆಯಿಂದ ನೀನು ಎಲ್ಲವನ್ನೂ ತಿಳಿದಿರುವೆ '.

' ಯಾವ ಕರ್ಮವನ್ನು ಮಾಡಬೇಕು, ಯಾವುದು ಅಕರ್ಮ, ಯಾವುದನು ಬಿಡಬೇಕು, ಎಂಬುದು ನೇದದಲ್ಲಿ ಹೇಳಲ್ಪಟ್ಟಿದೆ ; ಅದನ್ನು ಸಾಮಾನ್ಯ ಮನುಷ್ಯರು ತಿಳಿಯಲಾರರು : ವೇದಗಳು ಭಗವಂತನ ಸ್ವರೂಪವೇ ಆದ್ದರಿಂದ ಜ್ಞಾನಿಗಳೂ ಕೂಡ ಸರಿಯಾದ ಅರ್ಥವನ್ನು ತಿಳಿಯಲು ಪರಿತಪಿಸುತ್ತಾರೆ '.

ಇದರಿಂದ ಏನೂ ತಿಳಿಯದ ಅಜ್ಞಾನಿಗಳು ಯಾವ ಆತಂಕವೂ ಇಲ್ಲದೇ ಶಾಸ್ತ್ರಗಳನ್ನು ಟೀಕೆ ಮಾಡಬಹುದಲ್ಲವೇ ? ಇದು ಅವರಿಗೆ ದೊರೆತಿರುವ ವಿಚಿತ್ರವಾದ ಹಕ್ಕಾಗಿದೆ : ತಮ್ಮ ಯೋಗ್ಯತೆಯನ್ನೂ ತಿಳಿಯದೇ ಮಾತನಾಡುತಾರೆ.

ಧರ್ಮವನ್ನು ಆರಿತಿರುವ ಜ್ಞಾನಿಗಳು ಭಗವಂತನ ವಿಚಾರದಲ್ಲಿ ಪ್ರಶ್ನೆಗಳನ್ನೂ ಮಾಡಕೂಡದು ಎಂದು ತಿಳಿದಿದ್ದಾರೆ : ಬಭ್ರುಪ್ರಭದೇವನ ಮಕ್ಕಳು ವಿದೇಹ ರಾಜನನ್ನು ಅನುಗ್ರಹಿಸಿದಾಗ ಅವನು ಈ ರೀತಿ ಹೇಳಿದನು : ' ನಾನು ನಿಮ್ಮನ್ನು ಶ್ರೀ ಹರಿಯ ಸಾಕ್ಷಾತ್ ಪಾರ್ಷದರೆಂದು ತಿಳಿಯುತ್ತೇನೆ : ತಾವು ಈ ಪ್ರಪಂಚವನ್ನು ತಮ್ಮ ಪಾದಸ್ಪರ್ಶದಿಂದ ಪವಿತ್ರಗೊಳಿಸಲು ಸಂಚರಿಸುತ್ತಿದ್ದೀರಿ : ಮನುಷ್ಯ ಜನ್ಮವನ್ನು ಪಡೆಯುವುದು ಬಹಳ ಕಷ್ಟ : ಅಂತಹ ಜನ್ಮ ದೊರಕಿದರೂ ಸಾರ್ಥಕ ಪಡಿಸಿಕೊಳ್ಳುವವರು ಬಹಳ ಅಪರೂಪ : ಆದುದರಿಂದ ಮಾನವನಿಗೆ ನಿಜವಾದ ಒಳ್ಳೆಯದು ಯಾವುದೆಂಬುದನ್ನು ತಿಳಿಯಲು ಬಯಸುತ್ತೇನೆ : ನನಗೆ ಅರ್ಹತೆ ಇದೆಯೆಂದು ಭಾವಿಸಿದರೆ ಏಯುವಿಟ್ಟು ಭಾಗವತ ಧರ್ಮವನ್ನು ಉಪದೇಶಮಾಡಿ ಅನುಗ್ರಹಿಸಿ '.

ಅಂದರೆ, ನನಗೆ ಅರ್ಹತೆ ಇದ್ದರೆ ಎಂಬುದೊಂದನ್ನುಳಿದು ಏಕ್ಕ ಯಾವ ಪ್ರಶ್ನೆಯೂ ಇಲ್ಲ : ಆದರೆ ಈಗಿನ ಶಾಸ್ತ್ರಗಳ ಟೀಕಾಕಾರರು ಹಾಗೂ ಶಾಸ್ತ್ರ ಕರ್ತರುಗಳು ತಮಗಿರುವ ಅಧಿಕಾರವನ್ನು ಗಮನಿಸುವುದೇ ಇಲ್ಲ.

' ಬರಿಯ ಒಣ ಪ್ರಶ್ನೆಗಳನ್ನು ಮಾಡುವುದು ಪಾಪ ; ಏಕೆಂದರೆ ವಿಶ್ವದ ನಿಜವಾದ ಸ್ವರೂಪವೇನು ? ಇದಕ್ಕೆ ಕಾರಣವೇನು ? ಇದಕ್ಕೆ ಊಹಾಪೋಹದಿಂದಾಗಲೀ ತರ್ಕದಿಂದಾಗಲೀ ಉತ್ತರವು ದೊರಕುವುದಿಲ್ಲ ' — ಇದನ್ನು ಈಗಿನ ಟೀಕಾಕಾರರು ನೆನೆಯುವುದೇ ಇಲ್ಲ ; ಮಾರ್ಕ್ಸ್ ಪ್ಲಾಂಕನು ಈಗಲಾನೇ ಯಾವ ಮನುಷ್ಯನೂ ಅಷ್ಟಿಕ್ಕ ಬುದ್ಧಿ ಇಲ್ಲದೇ ಬರಿಯ ತರ್ಕದಿಂದ ತಾನೇ ತಿಳಿದುಕೊಳ್ಳುವುದು ಸಾಧ್ಯವಿಲ್ಲವೆಂದು ಅರಿತಿದ್ದಾನೆ.

Interpretation of Shastras ಎಂಬ ಗ್ರಂಥದಿಂದ ಸಂಗ್ರಹಿಸಲಾಗಿದೆ

ಎ. ಸ. ಅಯ್ಯಂಗಾರ್, ಹೊಂಗನೂರು.

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ ವೈಭವ 5 ನೇ ವಾರ

ಶಿ ಸು

.... ಎ. ವಿ. ಎಂ. ರವರ ಅಶ್ವಮೇಧ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ- ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ— 10-10-64 ರಿಂದ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ— ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ— ಜನಪ್ರಿಯ 2 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅಶ್ವಮೇಧ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana '

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4